

ದಕ್ಷಿಣ ಕೊರಿಯಾದ ಖ್ಯಾತ ಕೆ–ಪಾಪ್ ಬ್ಯಾಂಡ್ 'ರೆಡ್ ವೆಲ್ವೆಟ್' ಸದಸ್ಯರು

## ಏನೇ ಕೇಳಿ, ನಮ್ಮವರಾಗಿಯೇ ಇರಿ

ಕನ್ನಡ ಸಿನಿಮಾಗೀತೆಗಳಿಗೆ ಸ್ವರ ಸಂಯೋಜನೆ ಮಾಡುವ ಅನೂಪ್ ಸೀಳಿನ್ ಪಾಶ್ಚಾತ್ಯ ಸಂಗೀತದ ಈ ಗುಂಗನ್ನು ತುಸು ವಾರೆಗಣ್ಣಿನಿಂದಲೇ ನೋಡುತ್ತಾರೆ. 'ಯಾವುದೇ ಸಂಗೀತ ಕೇಳಿ ಖುಷಿಪಡುವುದು ತಪ್ಪೇನೂ ಅಲ್ಲ. ಆದರೆ, ನಮ್ಮ ಮಣ್ಣಿನಿಂದ ಆಚೆ ಇರುವುದನ್ನು ವಿಪರೀತ ಹಚ್ಚಿಕೊಳ್ಳುವುದು ಅಷ್ಟೇನೂ ಒಳ್ಳೆಯದಲ್ಲ. ಅದನ್ನು ನಮ್ಮ ಮಣ್ಣಿಗೇ ಒಗ್ಗಿಸಿಕೊಂಡು ಗುಂಗು ಹತ್ತಿಸಿಕೊಂಡರೆ ತಪ್ಪೇನಿಲ್ಲ. ನನಗೂ ಐದು ವರ್ಷದ ಮಗಳಿದ್ದಾಳೆ. ಯಾವ್ಯಾವುದೋ ಹಾಡುಗಳನ್ನು ಕೇಳಿಕೊಂಡು ಬಂದು ಗುನುಗತೊಡಗುತ್ತಾಳೆ. ಅದರಲ್ಲಿ ಯಾವುದನ್ನಾದರೂ ಹಾಡಕೂಡದು ಎನಿಸಿದರೆ ನಾವು ಬೇಡ ಎಂದು ಸುಮ್ಮನಾಗಿಸುತ್ತೇವೆ. 'ಕರೆಂಟು ಹೋದ ಟೈಮಲಿ, ಹುಡುಗಿ ಇದ್ಲು ಪಕ್ಕದಲ್ಲಿ' ಅಂತ ನಾನೇ ಸಂಗೀತ ನೀಡಿರುವ ಹಾಡನ್ನು ಮಗಳಿಗೆ ಕೇಳಿಸಲು ಸಾಧ್ಯವಿಲ್ಲ. ಅದು ಎಲ್ಲ ಪೋಷಕರಿಗೂ ಅರಿವಿರಬೇಕು. ಈಗಿನ ಮಕ್ಕಳು ಸಾಹಿತ್ಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಬೇರೆ ಭಾಷೆಯ ಹಾಡುಗಳನ್ನು ಹೇಳತೊಡಗುವುದು ಮಾಮೂಲಿ ಆಗಿಬಿಟ್ಟಿದೆ. ಅದು ಮುಂದೆ ಅವರ ಬದುಕಿನಲ್ಲಿ ಹಾಗೇ ಉಳಿಯದಂತೆ ಎಚ್ಚರ ವಹಿಸುವುದು ಉತ್ತಮ' ಎನ್ನುವುದು ಅನೂಪ್ ಸೀಳಿನ್ ಸಲಹೆ.



ಕನ್ನಡ ಚಿತ್ರ ಸಂಗೀತದಲ್ಲಿ ಹಂಸಲೇಖ ಮಾಡಿರುವ ಪ್ರಯೋಗಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬಂದಿರುವ ಅನೂಪ್ ಇಲ್ಲಿ ಜನಪ್ರಿಯ ಸಂಗೀತ ಕಟ್ಟುವಿಕೆಯಲ್ಲಿ ನಡೆದಿರುವ ನೆಲದ ಕೆಲಸದ ಮೇಲೆಯೂ ಬೆಳಕು ಚೆಲ್ಲುತ್ತಾರೆ: 'ಹಂಸಲೇಖ ಆಗಲಿ, ಇಳಯರಾಜ, ಎಂ.ಎಂ.ಕೀರವಾಣಿ ಅವರಂಥವರಾಗಲೀ ಇಲ್ಲಿನ ಭಾಷೆಗೆ ಬದ್ಧರು. ಆದಕ್ಕೇ ಅವರು ಯಾವುದೇ ರೀತಿಯ ಸಂಗೀತವನ್ನು ತಂದರೂ ಈ ನೆಲಕ್ಕೆ ಒಗ್ಗಿಸಿಯೇ ಹಾಡುಗಳನ್ನು ಮಾಡಿದರು. ಎ.ಆರ್‌. ರೆಹಮಾನ್ 'ಇಂಡಿಯನ್' ಸಿನಿಮಾದಲ್ಲಿ 'ಟೆಲಿಫೋನ್ ಧುನ್ ಮೆ ಹಸ್ನೇವಾಲಿ' ಎಂಬೊಂದು ಹಾಡಿಗೆ ಸ್ವರ ಸಂಯೋಜನೆ ಮಾಡಿದ್ದರು. ಅದು ಎಮಿನೆಮ್ ಎಂಬ ಜನಪ್ರಿಯ ಸಂಗೀತಗಾರನ ಲಯವನ್ನು ಒಳಗೊಂಡಿತ್ತು. ಅದರ ಮೇಲೆ ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗವನ್ನು ತಂದು ಕೂರಿಸಿದರು. ಹೀಗೆ ಮಾಡುವುದರಿಂದ ನಾವೆಲ್ಲ ನಮ್ಮ ನೆಲಕ್ಕೇ ಬಂದಂತಾಗುತ್ತದೆ. ಈಗ ಯಾರೆಲ್ಲ ಬೇರೆ ಬೇರೆ ಸಂಗೀತಗಳನ್ನು ಕೇಳಿ ಖುಷಿ ಪಡುತ್ತಿದ್ದಾರೋ ಅವರೆಲ್ಲರೂ ನಮ್ಮದೇ ಸಂಗೀತದ ಗುಂಗಿಗೇ ಮರಳುವುದರಲ್ಲಿ ನನಗೆ ಅನುಮಾನಗಳೇನೂ ಇಲ್ಲ'.

ಸಂಗೀತವನ್ನು ಕೇಳಿ, ಅದರಿಂದ ಒಳಿತನ್ನಷ್ಟೆ ತೆಗೆದುಕೊಂಡು ಸುಮ್ಮನಾಗಬೇಕೇ ವಿನಾ ವಿಪರೀತ ಆರಾಧನಾಭಾವದಲ್ಲಿ ನಮ್ಮತನವನ್ನು ಕಳೆದುಕೊಳ್ಳಬಾರದು ಎನ್ನುವುದು ಅನೂಪ್ ಕಳಕಳಿ.

ಎಂಬ ಆಲ್ಬಂ ಅನ್ನು 2016ರಲ್ಲಿ ಬಿಡುಗಡೆ ಮಾಡುವ ಮೂಲಕ ಈ ಬ್ಯಾಂಡ್ ಸದ್ದು ಪ್ರಾರಂಭಿಸಿತು. 'ಬಿಲ್‌ಬೋರ್ಡ್ ವರ್ಲ್ಡ್ ಡಿಜಿಟಲ್ ಸಾಂಗ್ಸ್ ಸೇಲ್ಸ್' ಪಟ್ಟಿಯಲ್ಲಿ ಮೊದಲ ಎರಡು ಸ್ಥಾನಗಳಲ್ಲಿ ದೀರ್ಘಾವಧಿ ಈ ತಂಡದ ಮೊದಲ ಹಾಡು ಇತ್ತು. 'ಬಿಗ್ ಬ್ಯಾಂಗ್' ಹಾಗೂ ಗಗ್ನಂ ಸ್ಟೈಲ್ ಸೃಷ್ಟಿಕರ್ತನ ನಂತರ ಈ ಪಟ್ಟಿಗೆ ಸೇರಿದ ಕೊರಿಯಾದ ಮೂರನೇ ಬ್ಯಾಂಡ್ ಎನ್ನುವ ಗೌರವ 'ಬ್ಲ್ಯಾಕ್ ಪಿಂಕ್'ನದ್ದಾಯಿತು. ಕೆ–ಪಾಪ್‌ನಲ್ಲಿ ಅತಿ ಹೆಚ್ಚು ಜನಪ್ರಿಯವಾದ ಬಾಲಕಿಯರ ಬ್ಯಾಂಡ್ ಇದು. ಅಷ್ಟೇ ಅಲ್ಲ, ವಿಶ್ವದಲ್ಲೇ ಇಷ್ಟು ಜನಪ್ರಿಯವಾದ ಬಾಲಕಿಯರ ಇನ್ನೊಂದು ಬ್ಯಾಂಡ್ ಇಲ್ಲ. ಡಯೊರ್, ಸೇಂಟ್ ಲಾರೆಂಟ್, ಬಲ್ಗರಿ, ಸೆಲಿನ್ ತರಹದ ಐಷಾರಾಮಿ ಉತ್ಪನ್ನಗಳ ರಾಯಭಾರಿಗಳಾಗಿಯೂ 'ಬ್ಲ್ಯಾಕ್ ಪಿಂಕ್' ಸಂಗೀತಗಾರರು ಗುರುತಾಗಿದ್ದಾರೆ. ಯುವತಿಯರು ಹಾಗೂ ಪ್ರೌಢಾವಸ್ಥೆಯ ಹುಡುಗಿಯರ ಮೇಲೆ ಫ್ಯಾಷನ್ ವಿಷಯದಲ್ಲಿ ಇವರ ಪ್ರಭಾವ ಹೆಚ್ಚೇ ಇದೆ. ದಕ್ಷಿಣ ಕೊರಿಯಾದ ಸಾಂಪ್ರದಾಯಿಕ ಉಡುಗೆ ಹ್ಯಾನ್‌ಬೋಕ್ ಅನ್ನು 'ಹೌ ಯೂ ಲುಕ್ ಲೈಕ್' ಎಂಬ ಗೀತೆಯಲ್ಲಿ ತೊಟ್ಟಿದ್ದೇ ಅದು ವಿಶ್ವಮಟ್ಟದಲ್ಲಿ ಗಮನಸೆಳೆಯಿತು.

ಸಂಗೀತ ಹಾಗೂ ಫ್ಯಾಷನ್ ಪ್ರತ್ಯೇಕ ಅಲ್ಲ ಎನ್ನುವ ಜಾಹೀರಾತುಪ್ರಜ್ಞೆಯನ್ನು ಇಟ್ಟುಕೊಂಡೇ ಬಿಟಿಎಸ್ ಹಾಗೂ ಬ್ಲ್ಯಾಕ್ ಪಿಂಕ್ ತರಹದ ಬ್ಯಾಂಡ್‌ಗಳು ಯುವತಿಯರನ್ನು ಹಿಡಿದಿಟ್ಟಿವೆ. ಕೆಲವು ಪ್ರೌಢ ಹೆಣ್ಣುಮಕ್ಕಳು ತಮ್ಮ ಹುಟ್ಟಿದ ಹಬ್ಬದ ಕೇಕ್‌ನ ಕ್ರೀಮ್ ಮೇಲೆ ಬಿಟಿಎಸ್ ಎಂಬ ಬರಹ ಇರಬೇಕೆಂದು ಬಯಸುವುದು ಖುಷಿಯ ಸಂಗತಿಯಾಗಿದೆ. ಅವರು ತೊಡುವ ಉಡುಗೆಗಳು, ಉಪಯೋಗಿಸುವ ಪ್ರಸಾಧನ ಸಾಧನಗಳನ್ನು ತಾವೂ ಖರೀದಿಸಬೇಕೆಂಬ ಅಭಿಮಾನದ ಹುಚ್ಚುಹೊಳೆ ಹರಿಯುತ್ತಲೇ ಇದೆ.

ಈ ರೀತಿ ಬೇರೆ ಯಾವುದೇ ದೇಶದ ಸಂಗೀತ ನಮ್ಮ ನೆಲದಲ್ಲಿ ಇದ್ದಕ್ಕಿದ್ದಂತೆ ಇಷ್ಟು ಜನಪ್ರಿಯವಾಯಿತೆ? ಇದು ದಿಢೀರನೆ ಆದ ಬದಲಾವಣೆ ಅಲ್ಲ ಎನ್ನುವುದೇ ಸಂಗೀತ ಕ್ಷೇತ್ರದ ನಮ್ಮ ಹುಡುಗ–ಹುಡುಗಿಯರ ಅನುಭವ ನುಡಿ.

### ಶಾಲಾದಿನಗಳ 'ವೈಬ್ಸ್'

'ಫ್ರೆಂಚ್ ಬಿರಿಯಾನಿ' ಕನ್ನಡ ಚಿತ್ರದಲ್ಲಿ 'ಬೆಂಗಳೂರ್' ಹಾಡನ್ನು ರ್‍ಯಾಪ್ ಶೈಲಿಯಲ್ಲಿ ಹಾಡಿದ್ದ ಅದಿತಿ ಚಿಕ್ಕಂದಿನಿಂದಲೂ ಇಂತಹ ಹಾಡುಗಳ ಪರಿಚಯ ಇರುವವರು. ಇಂತಹ ಸಂಗೀತ ಕಿವಿಮೇಲೆ ಬೀಳಲು ಕಾರಣವೇನು ಎನ್ನುವುದನ್ನು ಅವರು ಹೇಳುವುದು ಹೀಗೆ: 'ನಮಗೆ ಶಾಲೆಯಲ್ಲಿ ಆದಷ್ಟೂ ಇಂಗ್ಲಿಷನ್ನು ನೋಡಿ, ಕೇಳಿ ಎನ್ನುತ್ತಿದ್ದರು. ಇದರಿಂದ ಸಿನಿಮಾಗಳು, ಹಾಡುಗಳಲ್ಲೂ ಆ ಭಾಷೆ ಕೇಳುವುದು ಸಹಜವೇ ಆಯಿತು. ನನಗೆ ಮನೆಯಲ್ಲಿ ಅಪ್ಪ–ಅಮ್ಮನ ಕಲೆಯ ನೆರಳಿತ್ತು. ಹೀಗಾಗಿ ಬೇರೆ ಬೇರೆ ಬಗೆಯ ಸಂಗೀತದ